# <u>ಸಿಸಿ ನಂ.2287/2021</u>

ಕರ್ನಾಟಕ ಸರ್ಕಾರದ ( ಚನ್ನಗಿರಿ  ಪೊಲೀಸ್ ಠಾಣೆ )

ವಿರುದ್ಧ

**ಆರೋಪಿ:** 1 ) ಜಗನ್ನಾಥ  ಬಿನ್ ಶ್ರೀಕಾಂತಯ್ಯ ,
ವಃ 48 ವರ್ಷ, ಉಃ ವ್ಯವಸಾಯ ,
ಗೌಡರ ಬೀದಿ, ಚನ್ನಗಿರಿ ತಾಲ್ಲೂಕು.
ದಾವಣಗೆರೆ ಜಿಲ್ಲೆ .

2 )  ಶೈಲಜ  ಬಿನ್ ಜಗನ್ನಾಥ,
ವಃ 43 ವರ್ಷ, ಉಃ ಶಾಪ್ ಕೀಪರ್ ,
ಗೌಡರ ಬೀದಿ, ಚನ್ನಗಿರಿ ತಾಲ್ಲೂಕು.
ದಾವಣಗೆರೆ ಜಿಲ್ಲೆ .

ನಾನು ಶ್ರೀ ಎಸ್. ಬಿ. ಗಂಗಾಧರಮಠ ,  ಬಿ. ಕಾಂ., ಎಲ್. ಎಲ್. ಬಿ., ( ಸ್ಪೇಷಲ್ ) 01 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ,  ಈ ಮೇಲ್ಕಾಣಿಸಿದ  ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆರೋಪಕ್ಕೆ  ಗುರಿಪಡಿಸುತ್ತೇನೆ.

## <u>ದೋಷಾರೋಪಣೆ</u>

1. ಮೊದಲನೇದಾಗಿ  ದಿನಾಂಕಃ19-05-2020 ರಂದು ಬೆಳಗ್ಗೆ 10.30 ಎ.ಎಂ. ಗಂಟೆಯ ಸಮಯದಲ್ಲಿ ಚಾಸಾ.01 ರವರು ಜೆ ಹೆಚ್ ಪಟೇಲ್ ಬಡಾವಣೆಯ ಸಮೀಪವಿರುವ ಚನ್ನಗಿರಿ ಟೌನ್ ರಿ.ಸ.ನಂ-99/3 ರ ಜಮೀನಿನಲ್ಲಿ ಟ್ರ್ಯಾಕ್ಟರ್ ನಲ್ಲಿ ಸಾಗುವಳಿ ಮಾಡುತ್ತಿರುವಾಗ ಆರೋಪಿತರಾದ ನೀವುಗಳು ಗಲಾಟೆ ಮಾಡುವ ಸಮಾನ ಉದ್ದೇಶದಿಂದ ಏಕಾಏಕಿ ಬಂದು  ಚಾಸಾ.01 ರವರಿಗೆ ಕೈಯಿಂದ ಹೊಡೆದು ಸಾದಾರಣ ಸ್ವರೂಪದ ಗಾಯವನ್ನುಂಟುಮಾಡಿರುವುದರ ಮೂಲಕ ಭಾ.ದಂ.ಸಂ. ಕಾಯ್ದೆ ಕಲಂ.323 ಸಹ ಕಲಂ 34 ರಂತೆ ದಂಡನೀಯ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ ?

2. ಎರಡನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಗಲಾಟೆ ಮಾಡುವ ಸಮಾನ ಉದ್ದೇಶದಿಂದ  ಚಾಸಾ.01 ರವರಿಗೆಅವ್ಯಾಚ್ಯವಾಗಿ ಬೈದಾಡಿರುವುದರ  ಮೂಲಕ ಭಾ.ದಂ.ಸಂ. ಕಾಯ್ದೆ ಕಲಂ.504 ಸಹ ಕಲಂ 34 ರಂತೆ ದಂಡನೀಯ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ ?

3. ಮೂರನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಚಾಸಾ.01 ರವರಿಗೆ ಜೀವ ಬೆದರಿಕೆ ಹಾಕಿರುವುದರ ಮೂಲಕ ಭಾ.ದಂ.ಸಂ. ಕಾಯ್ದೆ ಕಲಂ.506 ಸಹ ಕಲಂ 34 ರಂತೆ ದಂಡನೀಯ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ ?

ನೀವು ಸದರಿ ಆರೋಪದ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಸ್ಥಳಃ ಚನ್ನಗಿರಿ.
ದಿನಾಂಕಃ 16-06.2022.

Sd/-.
**C/C.** 01 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ಚನ್ನಗಿರಿ.